ಸಿ.ಸಿ. ನಂ. 361:2016

ಪಿ.ಡಬ್ಲ್ಯೂ:23 ಸಿ.ಡಬ್ಲ್ಯೂ:37

# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋಪಾಲಕೃಷ್ಣ |
| ತಂದೆಯ ಹೆಸರು | : | ಗುರುನಾಥ ಮಾಜಾಳಿಕರ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಖಾಸಗಿ ಕಂಪನಿ ಕೆಲಸ |
| ವಾಸ್ತವ್ಯ | : | ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ ದಿಃ **26 –03 –2024**

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ನನಗೆ ಆರೋಪಿತರ ಪರಿಚಯ ಇಲ್ಲ. ಅವರಿಗೆ ನಾನು ಯಾವುದೇ ಹಣ ಕೊಟ್ಟಿಲ್ಲ. ನಾನು ಅವರಿಗೆ ನೌಕರಿ ಕೊಡಿಸುತ್ತೇನೆ ಎಂದು ಮೋಸ ಮಾಡಿಲ್ಲ. ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ ಸ ಅ ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

2001 ನೇ ಇಸ್ವಿಯಲ್ಲಿ ಚಾಸಾ–1 ರವರು ನಮ್ಮ ಮನೆಗೆ ಬಂದು ನಾನು ನೌಕರಿ ಪ್ರಯತ್ನದಲ್ಲಿ ದ್ದು ಈ ಬಗ್ಗೆ ಹಿಮಾನಿ ಮುಸಾ ಮಾಸ್ತರ್ ಅವರು ನೌಕರಿ ಕೊಡಿಸುತ್ತಾರೆ ಮತ್ತು ಅವರ ಸಂಗಡಿಗರು ಸೇರಿ ನೌಕರಿ ಕೊಡಿಸುತ್ತಾರೆ ಅದಕ್ಕೆ ನಾನು ಅವರಿಗೆ ಹಣ ಮತ್ತು ಶಾಲಾ ದಾಖಲಾತಿಗಳನ್ನು ನೀಡುವುದಾಗಿ ಈ ಬಗ್ಗೆ ರೂ. 40 ರಿಂದ 45 ಸಾವಿರ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದು ನಾನು ನೌಕರಿಯ ಹುಡುಕಾಟದಲ್ಲಿದ್ದರಿಂದ ದಿಃ 12–02–2002 ರಂದು 7 ನೇ ಆರೋಪಿ ಜೊತೆ ಹೋಗಿ ಆನಂದ ಲಾಡ್ಜ ಉಳಿದ ಆರೋಪಿತರನ್ನು ಬೇಟಿಯಾಗಿದ್ದು ಅವರು ಸರಕಾರದ ವಿವಿಧ ಇಲಾಖೆಯಲ್ಲಿ ನೌಕರಿಯನ್ನು ಕೊಡಿಸುವುದಾಗಿ

ಸಿ.ಸಿ. ನಂ. 361:2016

ಪಿ.ಡಬ್ಲ್ಯೂ:23    ಸಿ.ಡಬ್ಲ್ಯೂ:37

ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ರೂ. 10000/- ಮತ್ತು ನನ್ನ ಎಸ್ ಎಸ್ ಎಲ್ ಸಿ ಅಂಕ ಪಟ್ಟಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನಿಂದ ರೂ. 10000/- ಪಡೆದುಕೊಂಡು ಉಳಿದ ಹಣವನ್ನು ಮತ್ತೋಮ್ಮೆ ನೀಡಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ನೌಕರಿ ಕೊಡಿಸೇ ಇದ್ದರಿಂದ 7 ನೇ ಆರೋಪಿಯನ್ನು ಬೇಟಿ ಯಾದಾಗ ನಾನು ನೌಕರಿ ಬಗ್ಗೆ ವಿಚಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ನೌಕರಿಯನ್ನು ಕೊಡಿಸದೇ ನನ್ನಿಂದ ರೂ. 10000/- ಪಡೆದು ಕೊಂಡು ನನಗೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 31-08-2002 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-31 ಎಂದು ಗುರುತಿಸಲಾಯಿತು. ಆರೋಪಿತರು ನನಗೆ ಮೋಸ ಮಾಡಿದರು ಸಹ ಅವರ ಜೊತೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎನ್ ವಿ ಎನ್ ವಕೀಲರಿಂದಃ</u>**

ಪಾಟಿಸವಾಲು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-26-03-2024

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,

ಕಾರವಾರ

ಸಿ.ಸಿ. ನಂ. :

ಪಿ.ಡಬ್ಲ್ಯೂ:     ಸಿ.ಡಬ್ಲ್ಯೂ:

ಸಿ.ಸಿ. ನಂ. :

ಪಿ.ಡಬ್ಲ್ಯೂ:    ಸಿ.ಡಬ್ಲ್ಯೂ:

(ಸಾಕ್ಷಿದಾರರು ಸಂಪೂರ್ಣವಾಗಿ ಕೊಂಕಣಿ ಭಾಷೆ ಮಾತನಾಡುವವರಾಗಿದ್ದು, ಆದ್ದರಿಂದ ಈ ನ್ಯಾಯಾಲಯದ ವಕೀಲರಾಗಿರುವ ಶ್ರೀ ವಿ.ಎ.ಟಿ. ವಕೀಲರನ್ನು ಸಾಕ್ಷಿದಾರರು ಕೊಂಕಣಿ ಭಾಷೆಯಲ್ಲಿ ಹೇಳುವ ವಿಷಯವನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಿ ನ್ಯಾಯಾಲಯಕ್ಕೆ ತಿಳಿಸಲು ನೇಮಿಸಿಕೊಳ್ಳಲಾಯಿತು. ಶ್ರೀ ವಿ.ಎ.ಟಿ. ವಕೀಲರು ತಮಗೆ ಕೊಂಕಣಿ ಮತ್ತು ಕನ್ನಡ ಭಾಷೆ ಗೊತ್ತಿರುವುದಾಗಿ ತಿಳಿಸಿರುತ್ತಾರೆ. ಶ್ರೀ ವಿ.ಎ.ಟಿ. ವಕೀಲರಿಗೆ ಪ್ರಮಾಣ ವಚನ ಭೋಧಿಸಲಾಯಿತು)

ಸಿ.ಸಿ. ನಂ. :

ಪಿ.ಡಬ್ಲ್ಯೂ:    ಸಿ.ಡಬ್ಲ್ಯೂ:

ಸಿ.ಸಿ. ನಂ. :

ಪಿ.ಡಬ್ಲ್ಯೂ:    ಸಿ.ಡಬ್ಲ್ಯೂ: